Mr. SPEAKER.—The supplementary is beyond the scops of the original question. It is disallowed.

Sri D. B. KALAMANKAR.—If it is brought to your notice that most of the Marathi and Urdu teachers are posted to Kannada schools and hence Marathi and Urdu medium schools are suffering, due to the ratio not being maintained will you rectify it ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಇಂತಹ ಕೊರತೆಗಳೇನೂ ಇಲ್ಲಿ ಕಾಣುತ್ತಿಲ್ಲ. ಎಲ್ಲೆಲ್ಲಿ ಯಾವ್ಯಾವ ಕೊರತೆಗಳಿವೆ ಅವನ್ನು ನಮಗೆ ತೋರಿಸಿದರೆ ಆಗ ಅದನ್ನು ನಾವು ಪರಿಶೀಲಿಸಲು ಅನುಕೂಲವಾಗುತ್ತದೆ.

Sri N. B. SIRDESAI.—May I know whether Government have received representations stating that sufficient number of Marathi and Urdu hands have not been posted in 1968 ? If so, what action have the Government taken ?

Sri N. M. KOTRABASAIAH SOGI.—Government have not received any representation regarding this so far.

Mandya Sugar Company

94. Sri L. SRIKANTAIAH (Nanjangud).—

Will the Minister for Industries, Information and Publicity be pleased to state :—

(*a*) when the Mandya Sugar Company was started and what percentage of share capital does the Government hold in this company ;

(*b*) what value did the shares of this company have from the date of its starting to 1967 in the open market (yearwise value of the share may be given) ;

(*c*) the profit made or loss sustained by the Company yearly from the date it started to 1967 (yearwise profit or loss may be given) ;

(*d*) the total indebtedness of the Company at present ;

(*e*) whether the Company has borrowed a crore of rupees from the State Bank of Mysore to pay the wages of its workers during 1965-66, 1966-67 ;

(*f*) whether they have advanced money to this Company and if so, when and how much ;

(*g*) whether the Company has started ancillary units to make use of its by-products ;

(*h*) whether they have at any time instituted a probe into the working of this Company ?

A.—Sri M. RAJASEKHARA MURTHY (Minister for Industries, Information and Publicity).—

(*a*) The Company was registered in the year 1933 and the State Government held about 55 per cent of the share capital of the Company.

(*b*) *Vide* statement 1 appended.

(*c*) *Vide* statement II appended.

(*d*) Rs. 178 lakhs as at 29-2-1968. In addition, deferred payment guarantee to the extent of Rs. 36·13 lakhs, for purchases of foreign machinery repayable in ten annual instalments, has been obtained and out of which first annual instalment has already been paid.

(*e*) No. But the Company has borrowed a sum of Rs. 110 lakhs from the State Bank of Mysore for financing the expansion programme of both the factory and distillery.

(*f*) The term loans advanced by the banks on the security of Government guarantees have been availed of by the Company between 1964–65 to 1967–68. No loans have been advanced by Government.

(*g*) Yes, an acetic acid plant has been erected.

(*h*) No.

STATEMENT I

Value of shares of the Company. Information prior to 1936 is not readily available.

1.	1936	Rs. 33
	1937	Rs. 35·75
	1938	Rs. 22 to 27·50
	1939	Rs. 30 to 40
	1940	Rs. 45
	1945	Rs. 59 to 62
	1950	Rs. 46
	1955	Rs. 55 to 58
	1960	Rs. 56 to 60
	1961	Rs. 50 to 60
	1962	Rs. 50
	1963	Rs. 44
	1664	Rs. 25 th 40
	1965	Rs. 16·50 to 27
	1966	Rs. 12 to 16
	1967	Rs. 11·25

(SRI M. RAJASEKHARA MURTHY)

STATEMENT II

			Lakhs
2.	1933–34	Profit	3·07
	1934–35	,,	3·87
	1935–36	,,	12·87
	1936–37	,,	3·22
	1937–38	,,	6·81
	1938–39	,,	19·07
	1939–40	,,	26·01
	1940–41	,,	11·80
	1941–42	,,	13.46
	1942–43	,,	9·82
	1943–44	,,	13·90
	1944–45	,,	14·36
	1945–46	,,	13·33
	1946–47	,,	14·19
	1947–48	,,	20·03
	1948–49	,,	26·86
	1949–50	,,	17·82
	1950–51	Loss	8·12
	1951–52	Prfit	57·29
	1952–53	,,	33·73
	1953–54	Loss	15·01
	1954–55	Profit	10·00
	1955–56	,,	14·12
	1956–57	,,	4·33
	1957–58	,,	28·37
	1958–59	,,	20·82
	1959–60	,,	28·10
	1960–61	,,	20·07
	1961–62	,,	12·10
	1962–63	,,	1·57
	1963–64	,,	12·68
	1964–65	,,	6·68
	1965–66	Loss	21·44
	1966–67	,,	35·95

ಶ್ರೀ ಎಲ್. ಶ್ರೀಕಂಠಯ್ಯ.—(ಸಿ)ಗೆ ಉತ್ತರವಾಗಿ ತಾವು ಕೊಟ್ಟಿರುವ ಸ್ಟೇಟ್‌ಮೆಂಟನ್ನು ನೋಡಿದರೆ ಅದರಲ್ಲಿರುವಂತೆ ನಷ್ಟ 65-66 ರಲ್ಲಿ 21·4 ಲಕ್ಷ 66-67 ರಲ್ಲಿ 35·95 ಲಕ್ಷ ಮತ್ತು 67-68 ಏನಿದೆ ಎನ್ನುವುದನ್ನು ಇನ್ನೂ ಗೊತ್ತಿಲ್ಲ. ಪ್ರತಿ ವರ್ಷವೂ ಈ ಮಂಡ್ಯ ಸಕ್ಕರೆ ಕಂಪನಿಯಲ್ಲ ನಷ್ಟವಾಗಲು ಅವರಿಂದೇನಾದರೂ ರಿಪೋರ್ಟನ್ನು ತರಿಸಿಕೊಳ್ಳುತ್ತಿದ್ದಿರಾ ?

ಶ್ರೀ ಎಂ. ರಾಜಶೇಖರ ಮೂರ್ತಿ.—65-66 ರಲ್ಲಿ ಸೆಂಟ್ರಲ್ ವೇಜ್ ಬೋರ್ಡಿನಲ್ಲಿ ಒಂದು ಅವಾರ್ಡ್ ಕೊಟ್ಟರು. ಇದರಿಂದ ಮೊದಲು 41 ಲಕ್ಷದಷ್ಟು ವೇಜಸ್ ಕೊಡುವುದನ್ನು 58 ಲಕ್ಷದವರಿಗೆ ಹೆಚ್ಚುಮಾಡಬೇಕಾಯಿತು. ಇದರಿಂದ 17 ಲಕ್ಷ ಹೆಚ್ಚು ಖರ್ಚು ಬಂತು ಮತ್ತು ಸಕ್ಕರೆ ಕಂಪನಿಗೆ ರಾಸ್ ಆಯಿತು. ಅಲ್ಲದೆ ಕಬ್ಬಿನ ಬೆಲೆ 62-63 ರಲ್ಲಿ ಒಂದು ಟನ್ನಿಗೆ 45 ರೂಪಾಯಿ

ಕೊಡುತ್ತಿದ್ದುದನ್ನು 56.80 ಒಂದು ಟನ್ನಿಗೆ ಏರಿದುದರಿಂದ ಇದರಿಂದ 40 ಲಕ್ಷ ಹೆಚ್ಚು ಖರ್ಚು ಬಂತು. ಪ್ರತಿವರ್ಷದ Balance Sheet ಮತ್ತು ಇತರ ವಿವರಗಳನ್ನು ತರಿಸಿ ನೋಡುತ್ತೇವೆ.

ಶ್ರೀ ಹೆಚ್. ದೇವೇಗೌಡ.—ಸಕ್ಕರೆ ಕಂಪನಿಯಲ್ಲಿ ಆಗುತ್ತಿರುವ ಲಾಸುಗಳನ್ನು ನಿರೂಪಿಸಿ ಕೊಳ್ಳಲು ಮೊಲಾಸಸ್ ಹಾಗೂ ಆಲ್ಕೋಹಾಲ್‌ನ್ನು ಹೆಚ್ಚಾಗಿ ತಯಾರುಮಾಡುತ್ತಿದ್ದರು. ಅದನ್ನು ಇನ್ನೂ ಹೆಚ್ಚು ಪ್ರಮಾಣದಲ್ಲಿ ಮಾಡಲು ಆಗುವುದಿಲ್ಲವೇ ?

ಶ್ರೀ ಎಂ. ರಾಜಶೇಖರಮೂರ್ತಿ.—ಆಲ್‌ಕೊಹಾಲ್ ತಯಾರು ಮಾಡುವುದನ್ನು ಈಚೆಗೆ ಜಾಸ್ತಿ ಮಾಡಲಾಗಿದೆ. ಇದರಿಂದ ಹಿಂದೆ 12 ಲಕ್ಷ ಬರುತ್ತಿದ್ದುದು ಇನ್ನುಮುಂದೆ 24 ಲಕ್ಷದವರೆಗೆ ಏರುತ್ತದೆ.

ಶ್ರೀ ಎಸ್. ಶಿವಪ್ಪ.—ಮೈಸೂರು ದೇಶದಲ್ಲಿ ಮಂಡ್ಯ ಸಕ್ಕರೆ ಕಾರ್ಖಾನೆ 1933 ನೇ ಇಸವಿಯಲ್ಲಿ ಸ್ಥಾಪಿತವಾಗಿ ಅತ್ಯಂತ ಪ್ರಮುಖವಾದ ಕಂಪನಿಯಾಗಿತ್ತು ಮತ್ತು ಇದರ ಷೇರು ಬೆಲೆ ಆಗ ನೂರಾರು 60 ರೂಪಾಯಿ ಇದ್ದದ್ದು ಇಂದು 11.2ಕ್ಕೆ ಇಳಿದಿದೆ. ಇಷ್ಟೊಂದು ನಷ್ಟವನ್ನು ಹೊಂದಿರತಕ್ಕ ಇನ್ನೂ ಲಾಭ ಹೊಂದುವಂತೆ ಮಾಡಲು ಮತ್ತು ಇಪ್ಪತ್ತಿನ ದಿವಸ ಇದರ ಬಗ್ಗೆ ವಿಚಾರ ಮಾಡಲು ಒಂದು ಎನ್‌ಕ್ವೈರಿ ಕಮಿಷನ್ ನೇಮಕ ಮಾಡಲು ಸರಕಾರ ಗಮನಿಸುತ್ತದೆಯೇ ?

ಶ್ರೀ ಎಂ. ರಾಜಶೇಖರಮೂರ್ತಿ.—ಈ ಕಂಪನಿಯಲ್ಲಿ ಏಕೆ ಲಾಸ್ ಆಗುತ್ತದೆ ಎನ್ನುವುದಕ್ಕೆ ಆಗಲೇ ಕಾರಣಗಳನ್ನು ಕೊಟ್ಟಿದ್ದೇನೆ. ಅಲ್ಲದೆ ಯಾವಾಗ ಕಬ್ಬಿನ ಬೆಲೆ ಹೆಚ್ಚಾಗಿ ಲಾಸಾಗುತ್ತದೆಯೋ ಅದಕ್ಕೆ ತಕ್ಕಂತೆ ಷೇರುಗಳ ಬೆಲೆಯೂ ಇಳಿಯುತ್ತದೆ ಮತ್ತು ಈಚೆಗೆ ಸೆಂಟ್ರಲ್ ಗವರ್ನಮೆಂಟಿನವರು ಸಕ್ಕರೆ ಬೆಲೆಯನ್ನು ಜಾಸ್ತಿ ಮಾಡಿದುದರಿಂದ ಅದರಂತೆ ಕಬ್ಬಿನ ಬೆಲೆಯೂ ಜಾಸ್ತಿಯಾಯಿತು ಮತ್ತು ಕನ್ನಂಬಾಡಿ ಕಟ್ಟೆಯಲ್ಲಿ ಹೋದ ಸಾರಿ ನೀರಿಲ್ಲದೆ ಇದ್ದ ಕಾರಣದಿಂದ ಕಬ್ಬು ಸರಬರಾಜಾಗದೆ ಸ್ವಲ್ಪಕಾಲ ಈ ಸಕ್ಕರೆ ಫ್ಯಾಕ್ಟರಿ ನಿಂತಿತ್ತು. Enquiry ಸಮಿತಿಯನ್ನು ನೇಮಕಮಾಡುವ ಅವಶ್ಯಕತೆ ಕಂಡುಬರುವುದಿಲ್ಲ. ಅನೇಕ ಸಕ್ಕರೆ ಕಂಪೆನಿಗಳ ಬ್ಯಾಲೆನ್ಸ್ ಷೀಟುಗಳೂ ಮತ್ತು ಷೇರ್‌ಗಳ ಪಟ್ಟಿಗಳು ಇವೆ ಅವುಗಳನ್ನೆಲ್ಲಾ ಓದುವುದಕ್ಕೆ ಇಲ್ಲಿ ಅವಕಾಶ ಕೊಟ್ಟರೆ ಸಾಕಷ್ಟು ವಿಷಯಗಳನ್ನು ಹೇಳುತ್ತೇನೆ. ಅಲ್ಲದೆ ಪಾಂಡವಪುರದ ಸಕ್ಕರೆ ಕಾರ್ಖಾನೆ ಅಪ್ಪರ್ ಏರಿಯಾದಲ್ಲಿದೆ; ಮಂಡ್ಯಾ ಕಾರ್ಖಾನೆ ಲೋಯರ್ ಏರಿಯಾದಲ್ಲಿದೆ. ಆದ್ದರಿಂದ ಪಾಂಡವಪುರಕ್ಕೆ ನೀರು ಸರಿಯಾಗಿ ಸರಬರಾಯಿ ಆದಂತೆ ಮಂಡ್ಯಾಕ್ಕೆ ನೀರು ಸರಬರಾಯಿ ಆಗುವುದಿಲ್ಲ. ಹೀಗೆ ನಾನಾ ಕಾರಣಗಳಿಂದ ವರಮಾನದಲ್ಲಿ ವ್ಯತ್ಯಾಸವಾಗಿದೆ.

ಶ್ರೀ ಎನ್. ಎ. ಚನ್ನೇಗೌಡ.—ಪಾಂಡವಪುರ ನೀರಿನ ಅನುಕೂಲಕ್ಕೆ ಮೆಲ್ಯಾಗದಲ್ಲಿದೆ, ಮಂಡ್ಯ ಕೆಳಭಾಗದಲ್ಲಿದೆ ಎಂದು ಮಾನ್ಯ ಮಂತ್ರಿಗಳು ತಪ್ಪುಹೇಳಿಕೆ ಹೇಳುತ್ತಿದ್ದಾರೆ. ಆದರೆ ಮಂಡ್ಯಾ ಕಾರ್ಖಾನೆಯಲ್ಲಿ ಮುಖ್ಯವಾಗಿ ನಷ್ಟಕ್ಕೆ ಕಾರಣ ಏನೆಂದರೆ ಅಲ್ಲಿ ಸಕ್ಕರೆಮಾಡತಕ್ಕ ಕಬ್ಬನ್ನು ಕ್ರಷ್‌ಮಾಡಿದ್ದರಲ್ಲಿ ಸಾರ 10 ಪರ್ಸೆಂಟಿನಿಂದ 8 ಪರ್ಸೆಂಟಿಗೆ ಇಳಿದಿರುವುದೇ ಕಾರಣ ಎಂದರೆ ಅದು ಸರಿಯಲ್ಲವೇ ?

ಶ್ರೀ ಎಂ. ರಾಜಶೇಖರಮೂರ್ತಿ.—ಅದು ಒಂದೇ ಕಾರಣವಲ್ಲ. ಕಬ್ಬಿನ ಬೆಲೆ ಕೂಡ ಜಾಸ್ತಿ ಆಗಿದೆ. ಸಾರದ ಇಳುವರಿಯೂ ಇದೆ. 1966-67ರಲ್ಲಿ ಆ ಇಳುವರಿ ಶೇ. 8·05 ಇತ್ತು. ಈಗ ಅದು ಕ್ರಮೇಣ ಶೇ. 10ಕ್ಕೆ ಏರುತ್ತಿದೆ. ಇದರಿಂದ ಮುಂದೆ ಲಾಭ ದೊರೆಯಬಹುದು.

ಶ್ರೀ ಎಂ. ಮಂಚೇಗೌಡ.—ಅಲ್ಲಿ ರೈತರಿಂದ ಯಾವ ಪ್ರಮಾಣದಲ್ಲಿ ಒಪ್ಪಿಗೆ ಕಬ್ಬನ್ನು ಕಾರ್ಖಾನೆಗೆ ತೆಗೆದುಕೊಳ್ಳಬೇಕಾಗಿತ್ತೋ ಆ ಪ್ರಮಾಣದಲ್ಲಿ ತೆಗೆದುಕೊಳ್ಳದ ಅದನ್ನು ಬೆಲ್ಲ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದರಿಂದ, ಅಲ್ಲಿ ಕ್ರಷ್ ಮಾಡಬೇಕಾಗಿದ್ದ ಕಬ್ಬಿನ ಪ್ರಮಾಣ ಬಿದ್ದುಹೋಗಿದ್ದರಿಂದ ಇಷ್ಟೆಲ್ಲಾ ನಷ್ಟಕ್ಕಾನಿಗೆ ಕಾರಣವಾಗಿದೆ. ಆದ್ದರಿಂದ ಸರ್ಕಾರದವರು ಒಂದು ನಿಷ್ಪಕ್ಷಪಾತವಾದ ವಿಚಾರಣೆಯನ್ನು ನಡೆಸುವುದಕ್ಕೆ ಸಿದ್ಧರಾಗಿದ್ದಾರೆಯೇ ?

ಶ್ರೀ ಎಂ. ರಾಜಶೇಖರಮೂರ್ತಿ.—ಮೊದಲು ಮಂಡ್ಯಾ ಕಾರ್ಖಾನೆಯಲ್ಲಿ ದಿನಕ್ಕೆ 1400 ಟನ್ ಕಬ್ಬನ್ನು ಅರೆಯುತ್ತಾಗುತ್ತಿತ್ತು. ಈಗ ಅದರ ಪ್ರಮಾಣವನ್ನು 2500 ಟನ್ನಿಗೆ ಹೆಚ್ಚಿಸುವುದಕ್ಕೆ ಪ್ರಯತ್ನ ಮಾಡಲಾಗಿದೆ. ಆದರೆ ನಮ್ಮಲ್ಲಿ ಅದು ಈಗ 2200 ಟನ್ನನ್ನು ಮಾತ್ರ ಅರೆಯುತಕ್ಕ ಮಟ್ಟಕ್ಕೆ ಬಂದಿದೆ. ಕಾರಣ ಏನೆಂದರೆ ನಮ್ಮಲ್ಲಿ ಹಿಂದೆ ಇದ್ದ ಹಳೆಯ ಮೆಷಿನ್ ಮತ್ತು ಈಗಿನ ಹೊಸ ಮೆಷಿನ್ ಎರಡನ್ನೂ ಜೋಡಿಸಿ ಕೆಲಸ ಮಾಡಬೇಕಾಗಿದೆ. ಆದ್ದರಿಂದ ಸ್ವಲ್ಪ ಅನಾನುಕೂಲವಾಗಿದೆ. ಇನ್ನು ಒಂದೆರಡು ತಿಂಗಳುಗಳಲ್ಲೇ ಇದು ಸರಿಹೋಗಬಹುದು. ಆದ್ದರಿಂದ ಇದಕ್ಕಾಗಿ ಒಂದು ಎನ್‌ಕ್ವೈರಿ ಕಮಿಷನ್ ನೇಮಕ ಮಾಡತಕ್ಕದ್ದು ಅನಾವಶ್ಯಕ, ಅದಕ್ಕೆ ಅಗತ್ಯವಿಲ್ಲ ಎಂದು ಹೇಳುತ್ತೇನೆ.

ಶ್ರೀ ಎಂ. ನಾಗಪ್ಪ.—ಮಾನ್ಯ ಸಚಿವರು ರೈತರು ಸರಿಯಾಗಿ ಕಬ್ಬನ್ನು ನರಬರಾಯಿ ಮಾಡುತ್ತಿಲ್ಲ ಎಂದು ಹೇಳಿದ್ದು ಸರಿಯಲ್ಲ. ಯಾವ ಯಾವ ವರ್ಷ ಎಷ್ಟೆಷ್ಟು ಕಬ್ಬನ್ನು ನರಬರಾಯಿ ಮಾಡುವುದಕ್ಕೆ ಒಪ್ಪಿಗೆಯನ್ನು ತೆಗೆದುಕೊಂಡಿದ್ದರೋ ಆಷ್ಟನ್ನೂ ಆಯಾಯ ವರ್ಷ ತಪ್ಪದೆ ನರಬರಾಯಿ ಮಾಡಿದ್ದಾರೆಂದರೆ ಅದನ್ನು ಒಪ್ಪುತ್ತೀರಾ ?

ಶ್ರೀ ಎಂ. ರಾಜಶೇಖರಮೂರ್ತಿ.—ನಾನು ರೈತರು ಸರಿಯಾಗಿ ಕಬ್ಬನ್ನು ನರಬರಾಯಿ ಮಾಡುತ್ತಿಲ್ಲ ಎಂದು ಹೇಳಲಿಲ್ಲವಲ್ಲ.

ಶ್ರೀ ಬಿ. ದೊಡ್ಡಬೋರೇಗೌಡ.—ಸ್ವಾಮಿ, ಅಲ್ಲಿ ದಿನಕ್ಕೆ ಮೂರೂವರೆ ಸಾವಿರ ಟನ್ ಕಬ್ಬನ್ನು ಅರೆಯುತ್ತೇವೆಂದು ಹೇಳಿ ಆಡಳಿತವರ್ಗದವರು 4 ಲಕ್ಷ ರೂಪಾಯಿ ಸಾಲ ಮಾಡಿ ಕಳೆದ ಸುಮಾರು ಒಂದೂಮುಕ್ಕಾಲು ತಿಂಗಳಿಂದಲೂ ದಿನಕ್ಕೆ ಕೇವಲ 700 ಟನ್‌ಗಳನ್ನು ಮಾತ್ರ ಅರೆಯರಾಗುತ್ತಿದ್ದರೂ ಇಲ್ಲಿ ಮಂತ್ರಿಗಳು ದಿನಕ್ಕೆ 2200 ಟನ್ ಕಬ್ಬನ್ನು ಅರೆಯರಾಗುತ್ತಿದೆ ಎಂದು ಹೇಳುತ್ತಿರುವುದು ನುಳ್ಳು. ಇವರು ಎಷ್ಟು ದಿವಸ ಆ ಕಾರ್ಖಾನೆಗೆ ಭೇಟಿಕೊಟ್ಟಿದ್ದಾರೆಂಬುದನ್ನು ತಿಳಿಸುವರೇ ಮತ್ತು ಒಂದು ಜುಡಿಷಿಯರ್ ಎನ್‌ಕ್ವೈರಿ ನಡೆಸುವುದಕ್ಕೆ ಏಕೆ ಒಪ್ಪುತ್ತಿರಾ ?

ಶ್ರೀ ಎಂ. ರಾಜಶೇಖರಮೂರ್ತಿ.—ನಾವು ಕೇಂದ್ರಸರ್ಕಾರಕ್ಕೆ ದಿನ ಒಂದಕ್ಕೆ 3,000 ಟನ್ ಕಬ್ಬನ್ನು ಅರೆಯಲು ಲೈಸೆನ್ಸ್ ಕೇಳಿದ್ದೆವು. ಅವರು ಸಧ್ಯದಲ್ಲಿ ದಿನ ಒಂದಕ್ಕೆ ಎರಡೂವರೆ ಸಾವಿರ ಟನ್ ಕಬ್ಬನ್ನು ಅರೆಯಲು ಲೈಸೆನ್ಸ್‌ನ್ನು ಕೊಟ್ಟಿದ್ದಾರೆ. ಶುರುವಿನಲ್ಲಿಲ್ಲ ಎರಡೂವರೆ ಸಾವಿರ ಟನ್ ಅರೆಯುವುದಕ್ಕೆ ಆಗಲಿಲ್ಲ. ಮೊದಲು ಸ್ವಲ್ಪ ತೊಂದರೆ ಇತ್ತು. ಎರಡು ಸಾವಿರದ ಇನ್ನೂರು ಟನ್ ಈಗ ರೀಚ್ ಆಗಿದ್ದೇವೆ—ಇನ್ನು ಒಂದೂವರೆ ತಿಂಗಳಿನಲ್ಲಿ 2500 ಟನ್‌ಗೆ ರೀಚ್ ಆಗುತ್ತದೆ.

Sri S. SIVAPPA.—The Hon'ble Minister for Industries is not supplying the correct information. The fact is that the new factory which has been installed is not working properly. He is suppressing the facts. An enquiry has to be conducted in this regard.

Mr. SPEAKER.—Is the member willing to have an enquiry ?

Sri M. RAJASEKHARA MURTHY.—There is no need to have an enquiry since it is working properly.

ಶ್ರೀ ಜಿ. ರಾಮೇಗೌಡ.—ಈಚೆಗೆ ಫ್ಯಾಕ್ಟರಿ ಎಕ್ಸ್‌ಪ್ಯಾನ್‌ಷನ್ ಅದಮೇಲೆ ಯಾರಾದರೂ ತಜ್ಞರಿಂದ ಇದನ್ನು ಎಕನಾಮಿಕರ್ ಆಗಿ ನಡೆಸಲು ಸಾಧ್ಯವಿದೆಯೇ ಇಲ್ಲವೇ ಎಂಬ ಅಭಿಪ್ರಾಯ ಪಡೆದಿದ್ದೀರಾ ?

ಶ್ರೀ ಎಂ. ರಾಜಶೇಖರಮೂರ್ತಿ.—ಈಗ ಎಕನಾಮಿಕರ್ ಆಗಿ ರನ್ ಆಗುತ್ತಾ ಇದೆ, ಮತ್ತೊಂದು ರಿಪೋರ್ಟ್ ತರಿಸತಕ್ಕ ಅವಶ್ಯಕತೆ ಇಲ್ಲ.

Sri H. SIDDAVEERAPPA.—What is the capital invested by the Government in this factory out of 55 per cent of the share capital ? What are the loan liabilities incurred by the Government including those that guaranteed and is it not a fact that the liabilities of the factory are far more than its assets as they stand to-day.

Sri M. RAJASEKHARA MURTHY.—The information of the Hon'ble member is not correct. The assets of the Company is Rs. 3.39 crores. Fixed deposit Rs. 1.74 crores Investment. ·37 lakhs, loans to bank Rs. 1. 38 crores total 3.49 crores. On liability side debentures 54 lakhs, reserves 53 lakhs, loans 1.20 crores, interests Rs. 11 lakhs, current liabilities Rs. 1.00 crores. Total 3.38 crores. Therefore the assets are more than the liabilities since the Company has got a reserve of 53 lakhs for the year 1966–67.

Sri H. SIDDAVEERAPPA.—Out of the assets of the Company, how much has been sold by the Government and how much has been reserved for the benefit of the factory ?

Sri M. RAJASEKHARA MURTHY.—The total acreage of the company is 2,800. We have disposed of 600 acres and the rest of the acreage is there for the benefit of the factory, at present.

ಶ್ರೀ ಎಂ. ಜಿ. ಬಣಕಾರ್.—ಸ್ವಾಮಿ ಸರ್ಕಾರ ಬಂಡವಾಳವನ್ನು ಒದಗಿಸಿದಮೇಲೆ ಈ ಫ್ಯಾಕ್ಟರಿಗಳಲ್ಲಿ ಲಾಸ್ ಬರುತ್ತಿದೆಯೇ ಅಥವಾ ಲಾಸ್ ಆಗತಕ್ಕ ಕಂಪೆನಿಗಳನ್ನೇ ಹುಡುಕಿ ಸರ್ಕಾರ ಬಂಡವಾಳ ಒದಗಿಸುತ್ತಿದೆಯೇ ?

ಶ್ರೀ ಎಂ. ರಾಜಶೇಖರಮೂರ್ತಿ.—ಇದು ಲಾಸ್ ಆಗುತ್ತಾ ಇರತಕ್ಕ ಕಂಪೆನಿ ಅಲ್ಲ.

ಶ್ರೀ ಎಂ. ಜಿ. ಬಣಕಾರ್.—ಇಲ್ಲಿಯವರೆಗೂ ಬಂಡವಾಳ ಹಾಕಿರತಕ್ಕ ಯಾವ ಫ್ಯಾಕ್ಟರಿಗಳೂ ಲಾಭದಲ್ಲಿ ನಡೆಯುತ್ತಾ ಇಲ್ಲ, ಸರ್ಕಾರದ ಹಣ ಹಾಕಿದ ಮೇಲೆ ಎಲ್ಲಾ ಲಾಸ್‌ನಲ್ಲಿ ಇವೆ.

ಶ್ರೀ ಎಂ. ಎಸ್. ಕೃಷ್ಣನ್.—ಉತ್ತರದಲ್ಲಿ "ಸರಕಾರದ ಷೇರು ಬಂಡವಾಳ ಸೇಕಡ 55 ರಷ್ಟಿದೆ, ಷೇರು ಬೆಲೆ ಕೆಲವುವೇಳೆ ಕಡಮೆಯಾಗಿದೆ, ನಷ್ಟವಾಗಿದೆ ಎಂದು ಕಂಡುಬರುತ್ತದೆ. ಬ್ಯಾಂಕಿನಿಂದ ನಷ್ಟವನ್ನು ಸರಿಪಡಿಸಲು ಸಾಲ ಪಡೆಯಲಾಗಿದೆ". ಇದರಿಂದ ನಷ್ಟವಾಗುತ್ತಿದೆ, ಕಂಪೆನಿ ಮುಂದುವರೆಯುತ್ತಿಲ್ಲ ಎಂದು ಗೊತ್ತಾಗುವುದಿಲ್ಲವೇ ? ಕಾರ್ಮಿಕರ ದೆಸೆಯಿಂದ ನಷ್ಟವಾಗಿಲ್ಲ, ಆಡಳಿತದ ಅದಕ್ಷತೆಯಿಂದ ನಷ್ಟವಾಗಿದೆ ಎಂದು ತಿಳಿಯಬಹುದೇ ? ಇದನ್ನು ಸರಿಪಡಿಸಲು ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

Sri M. RAJASEKHARA MURTHY.—I refute the allegations made by the Hon'ble Member. The Company's position is perfectly at right.

Sri B. P. GANGADHAR.—May I know whether the information furnished by the Hon'ble Minister is on the basis of the data furnished by the Department ?

Sri M. RAJASEKHARA MURTHY.—I have supplied the latest information available with me.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕೆಲವು ವರ್ಷಗಳಲ್ಲಿ ಸೇಕಡ 20, ಸೇಕಡ 30 ಇಷ್ಟರ ವರೆಗೆ ಡಿವಿಡೆಂಡ್ ಹಂಚಿಕೆಯಾಗಿಲ್ಲವೇ ? ಹೀಗಿದ್ದು ನಷ್ಟವಾಗುವ ಪರಿಸ್ಥಿತಿ ಬಂದುದಕ್ಕೆ ಕಾರಣ ಏನೆಂದು ತಿಳಿಯಲು ವರದಿಯನ್ನು ಸಂಬಂಧಪಟ್ಟವರಿಂದ ತರಿಸುತ್ತೀರಾ ?

Mr. SPEAKER.—That question has already been answered.

ಶ್ರೀ ಎಂ. ಮುಂಜೇಗೌಡ.—ಕ್ರಷಿಂಗ್ ಪ್ರಾರಂಭವಾದಮೇಲೆ 20 ಲಕ್ಷ ನಷ್ಟವಾಗಿದೆ, ತಜ್ಞರ ಅಭಿಪ್ರಾಯದ ಪ್ರಕಾರ ವಿಸ್ತರಣಾ ಕ್ರಮ ನಡೆದಿಲ್ಲವೆಂಬ ದೂರು ಕೇಳಿಬರುತ್ತಿದೆ. ಇದಕ್ಕೆ ಕಾರಣ ತಿಳಿದು ಸೂಕ್ತ ಕ್ರಮ ತೆಗೆದುಕೊಳ್ಳಲು ನಿಷ್ಪಕ್ಷಪಾತವಾದ ಒಂದು ಎನ್‌ಕ್ವೈರಿ ಯನ್ನೇಕೆ ಏರ್ಪಡಿಸಬಾರದು ?

Sri M. RAJASEKHARA MURTHY.—There is no need for any such enquiry. After the factory has commenced crushing, the company has not lost. It has made profit.

ಶ್ರೀ ನಾಗಪ್ಪ.—ಆಡಳಿತ ಮುಂಡಲಿಯೇ ನಷ್ಟಕ್ಕೆ ಕಾರಣ ಎಂದು ಹೇಳುತ್ತಿದ್ದಾರೆ. ಅದನ್ನು ಸರಕಾರ ಒಪ್ಪುವುದೇ ? ಕಂಪೆನಿಯ ಖರ್ಚು ಜಾಸ್ತಿಯಾಗಿದೆ ಎಂದು ಹೇಳುತ್ತಾರೆ ಅಲ್ಲಿರುವ ಡೈರೆಕ್ಟರು ತಮ್ಮ ಸಂಬಂಧಿಗಳಿಗೆ ಸಿಕ್ಕಾಪಟ್ಟೆ ಗ್ರೇಡನ್ನು ಕೊಟ್ಟು ಸಿಬ್ಬಂದಿ ವೆಚ್ಚ ಹೆಚ್ಚಾಗಲು ಕಾರಣರಾಗಿದ್ದಾರೆಂದು ಹೇಳುವುದನ್ನು ಸರಕಾರ ಒಪ್ಪುವುದೇ ?

ಶ್ರೀ ಎಂ. ರಾಜಶೇಖರ ಮೂರ್ತಿ.—ಹೋಟರ್ ವೇಜಸ್ ಕೊಡುತ್ತಿರುವುದು 57 ಲಕ್ಷ ರೂಪಾಯಿ, ಸಿಬ್ಬಂದಿ ಖರ್ಚು 3 ಲಕ್ಷ ರೂಪಾಯಿ. 5.5 ಪರ್ಸೆಂಟ್ ಎಸ್ಟಾಬ್ಲಿಷ್‌ಮೆಂಟ್ ಚಾರ್ಜಸ್ ಇದೆ. ಇದೇನು ಜಾಸ್ತಿ ಅಲ್ಲ.

Sri D. B. KALMANKAR.—It is seen from the answers given to clause (*b*) that the value of the shares have been going down. There is a steep downward trend in the value of the shares. May I know, what are the reasons for this ?

ಶ್ರೀ ಎಂ. ರಾಜಶೇಖರ ಮೂರ್ತಿ.—ಕಂಪನಿಗೆ ಪ್ರಾಫಿಟ್ ಕಡಿಮೆಯೆಂದರೆ ಷೇರು ಮಾರು ಕಟ್ಟೆಯಲ್ಲಿ ಷೇರು ಬೆಲೆ ಕಡಿಮೆಯಾಗುತ್ತದೆ.

ಶ್ರೀ ದೊಡ್ಡಬೊರೇ ಗೌಡ.—ನನ್ನ ಪ್ರಶ್ನೆಗೆ ಉತ್ತರ ಕೊಡಲಿಲ್ಲ. ಅದಕ್ಕೆ ಉತ್ತರ ಕೊಡಿಸ ಬೇಕು. 1962 ರಿಂದ ಅಲ್ಲಿ ಭ್ರಷ್ಟಾಚಾರ ನಡೆದಿದೆ. * * * *

ಶ್ರೀ ಕೆ. ಪುಟ್ಟಸ್ವಾಮಿ.—ಈ ಪ್ರಶ್ನೆಗೆ ಹೆಚ್ಚಿಗೆ ವಿವರಗಳನ್ನು ಮಾನ್ಯ ಸದಸ್ಯರು ಬಯಸು ವುದಾದರೆ ಅರ್ಧಗಂಟೆ ಕಾಲದ ಚರ್ಚೆಗೆ ಅವಕಾಶವಿದೆ. ಯಾರಾದರೂ ಸದಸ್ಯರು ಅಪೇಕ್ಷೆ ಪಟ್ಟರೆ ಅದನ್ನು ಒದಗಿಸಿಕೊಡುವುದಕ್ಕೆ ಸಾಧ್ಯವಾಗುತ್ತದೆ. ಆಗ ಚರ್ಚೆ ಮಾಡಬಹುದು.

ಶ್ರೀ ಎಂ. ಕೆ. ಬೊಮ್ಮೇ ಗೌಡ.—ಮ್ಯಾನೇಜ್‌ಮೆಂಟಿನವರು ಸರ್ಕಾರ ಕೊಟ್ಟಿದ್ದ ಜಮೀನಿ ನಲ್ಲಿ ಅರೇಳು ನೂರು ಎಕರೆಯನ್ನು ಮಾರುವುದಕ್ಕೆ ಕಾರಣವೇನು?

ಶ್ರೀ ಎಂ. ರಾಜಶೇಖರಮೂರ್ತಿ.—ಫಾರಂನಲ್ಲಿ ನಷ್ಟವಾಗುತ್ತಿತ್ತು. ಅದಕ್ಕೋಸ್ಕರ ಮಾರಿದ್ದಾರೆ.

(Several Members stood up to put supplementaries.)

Mr. SPEAKER.—If the Hon'ble Members give a notice for half-an-hour discussion on this question, I will permit it. Next Question.

Small Car Project

95. Sri SIDDAIAH KASHIMATH (Shirahatti).—

Will the Minister for Industries, Information and Publicity be pleased to state :—

(*a*) the number of applications received from entrepreneurs to start a small Car Project in the State ;

(*b*) the action taken thereon ?

A.—Sri M. RAJASEKHARA MURTHY (Minister for Industries, Information and Publicity).—

(*a*) Five.

(*b*) Out of the five applications the State Government have recommended the application of the Mysore State Industrial Investment and Development Corporation, Limited to the Government of India for the grant of an industrial licence.

ಶ್ರೀ ಸಿದ್ದಯ್ಯ ಕಾಶೀಮಠ.—ಸಣ್ಣ ಕಾರು ಯೋಜನೆ ಬಗ್ಗೆ ಈಗಾಗಲೇ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಸಿಫಾರಸು ಮಾಡಲಾಗಿದೆ ಎಂದು ಹೇಳಿದ್ದಾರೆ. ಕೇಂದ್ರ ಸರ್ಕಾರದಿಂದ ಅದಕ್ಕೆ ಏನಾದರೂ ಉತ್ತರ ಬಂದಿದೆಯೇ ?

ಶ್ರೀ ಎಂ. ರಾಜಶೇಖರಮೂರ್ತಿ.—ಕೇಂದ್ರ ಸರ್ಕಾರ ಯಾವ ಆಜ್ಞೆಯನ್ನು ತೀರ್ಮಾನವನ್ನೂ ತೆಗೆದುಕೊಂಡಿಲ್ಲ. ಒಂದು ವಾರದ ಹಿಂದೆ ಬಂದಿದ್ದ ಪ್ರೆಸ್ ರಿಪೋರ್ಟನ್ನು ಮಾನ್ಯ ಸದಸ್ಯರು ನೋಡಿರಬಹುದು. The report is that Government have taken the decision to take up this small Car project and that matter has been disclosed to the consultative committee. It appears that the concerned Ministry is going to move the Planning Commission to include it in the fourth five year plan.

**** Matter not recorded as ordered by the Chair.